Q.P. Code : 13102

# First Semester B.C.H.N./B.Com./B.C.S.P./B.C.T.T. Degree Examination, November/December 2019

*(CBCS Scheme – Freshers and Repeaters)*

**ಕನ್ನಡ ಭಾಷೆ**

## Paper I – ಕನ್ನಡ ಭಾಷಾ ಪತ್ರ

*Time : 3 Hours]* *[Max. Marks : 70*

I. (ಅ) ಕೆಳಗಿನ ಪದ್ಯದ ಭಾವಾರ್ಥ ಬರೆಯಿರಿ : **(1 × 6 = 6)**

ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ
ಕೂಡಲ ಸಂಗಮ ದೇವಾ

(ಆ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 2 = 4)**

1. ದ್ರೌಪದಿ
2. ವಚನ
3. ರಾಮನಾಥ
4. ಚಂದ್ರಶೇಖರ ಕಂಬಾರ

(ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(1 × 10 = 10)**

1. ದ್ರೌಪದಿಯ ಪ್ರಚೋದನೆಗೆ ಭೀಮನ ಪ್ರತಿಕ್ರಿಯೆಯನ್ನು ವಿವರಿಸಿ.
2. ವೈಚಾರಿಕತೆ ಮತ್ತು ಮೌಢ್ಯಗಳ ಸಂಘರ್ಷ 'ದೇವರು ಪೂಜಾರಿ' ಕವನದಲ್ಲಿ ಹೇಗೆ ಚಿತ್ರಿತವಾಗಿದೆ? ಚರ್ಚಿಸಿ.

II. (ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(2 × 5 = 10)**

1. ದೇವಿ ಹಳೆ ಮನೆಯಲ್ಲಿ ಬರ್ಮಾಚಾರಿಯನ್ನು ಸೆಳೆಯಲು ಮಾಡಿದ ಪ್ರಯತ್ನ
2. 'ರೊಟ್ಟಿ' ಕತೆಯಲ್ಲಿನ ಪೊಲೀಸರ ವರ್ತನೆ
3. ಚೆಕ್ಕರಾಮ ಮತ್ತು ಪುಟ್ಟಲಿಂಗ ಅಭಿನಯಿಸಿದ ನಾಟಕದ ಪ್ರಸಂಗ

(ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(1 × 10 = 10)**

1. ನಂಬಿಕೆ ಮತ್ತು ಆಚರಣೆಗಳು 'ಸೆರೆ' ಕತೆಯಲ್ಲಿ ಅನಾವರಣಗೊಂಡಿರುವ ಬಗೆಯನ್ನು ವಿವರಿಸಿ.
2. ಜೀತ ಪದ್ಧತಿಯ ಕರಾಳಮುಖ 'ಜೀತ' ಕತೆಯಲ್ಲಿ ಹೇಗೆ ವ್ಯಕ್ತವಾಗಿದೆ? ಚರ್ಚಿಸಿ.

III. (ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(1 × 5 = 5)**

1. ಕಿರಿಯ ರಾಣಿಯ ಮಾತಿಗೆ ರಾಜ ತೆಗೆದುಕೊಂಡ ತೀರ್ಮಾನಗಳು
2. ತೊಗಲು ಗೊಂಬೆಯಾಟದ ಪ್ರಾಚೀನತೆ

(ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(1 × 10 = 10)**

1. ಕಿತ್ತೂರು ರಾಣಿ ಚೆನ್ನಮ್ಮನ ಶೌರ್ಯವನ್ನು ವಿವರಿಸಿ.
2. ತೊಗಲು ಗೊಂಬೆಗಳನ್ನು ಕಲಾವಿದರು ತಯಾರಿಸುವ ಕ್ರಮಗಳನ್ನು ತಿಳಿಸಿರಿ.

IV. (ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(1 × 5 = 5)**

1. ಪ್ರಾಚೀನ ಕಾಲದಲ್ಲಿ ಗ್ರಂಥ ಪ್ರಸಾರದ ಸ್ವರೂಪ
2. ತ್ರಿಕರಣಗಳು ವ್ಯಾಪಾರಿ ಕ್ಷೇತ್ರದ ಮೇಲೆ ಬೀರುವ ಪ್ರಭಾವ

(ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(1 × 10 = 10)**

1. ಅಂಕಣ ಬರಹ ಎಂದರೇನು? ಅದರ ಸ್ವರೂಪ ಮತ್ತು ಪರಂಪರೆಯನ್ನು ವಿವರಿಸಿ.
2. ಕನ್ನಡ ಗ್ರಂಥೋದ್ಯಮದ ಸಮಸ್ಯೆಗಳೇನು? ಅದರ ಪರಿಹಾರೋಪಾಯಗಳನ್ನು ಚರ್ಚಿಸಿ.

---